# ಎನ್ಐಟಿಕೆ ವಿದ್ಯಾರ್ಥಿಗೆ 2.3 ಉದ್ಯೋಗ ಪ್ಯಾಕೇಜ್

ಸಂ.ಕ.ಸಮಾಚಾರ, ಮಂಗಳೂರು

ಎನ್ಐಟಿಕೆ ಸುರತ್ಕಲ್‌ನ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಯೊಬ್ಬರು 2023ರ ವಾರ್ಷಿಕ ಕ್ಯಾಂಪಸ್ ಡ್ರೈವ್‌ನಲ್ಲಿ ಯುಎಸ್ ಮೂಲದ ಕಂಪನಿಯಿಂದ 2.3 ಕೋಟಿ ರೂ ಪ್ಯಾಕೇಜ್ ಅನ್ನು ಪಡೆದುಕೊಂಡಿದ್ದಾರೆ. ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಾಮಾನ್ಯವಾಗಿ ಕನಿಷ್ಠ 5 ಲಕ್ಷ ವರೆಗಿನ ಅತ್ಯಂತ ಬೇಡಿಕೆಯ ಪ್ಯಾಕೇಜ್ನೊಂದಿಗೆ ಕೆಲಸ ಗಿಟ್ಟಿಸಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ, ಕಂಪ್ಯೂಟರ್ ಸೈನ್ಸ್‌ನ ಪದವೀಧರರನ್ನು ಆಫ್-ಕ್ಯಾಂಪಸ್ ಡ್ರೈವ್‌ನಿಂದ ಅಮೆರಿಕದ ಡಾಟಾಬ್ರಿಕ್ಸ್ ಕಂಪನಿಯು 2.3 ಕೋಟಿ ಪ್ಯಾಕೇಜ್ ನೀಡಿ ಕೆಲಸಕ್ಕೆ ಸೇರಿಸಿಕೊಂಡಿದೆ.

ಇದು ಕ್ಯಾಂಪಸ್ ಡ್ರೈವ್ ನಿಂದ ದಾಖಲಾದ ಈವರೆಗಿನ ಅತ್ಯಧಿಕ ಪ್ಯಾಕೇಜ್ ಆಗಿ ಹೊರಹೊಮ್ಮಿದೆ. ಆನ್-ಕ್ಯಾಂಪಸ್ ಪ್ಲೇಸ್ಮೆಂಟ್ಗಳು ಅತ್ಯಧಿಕ ಪ್ಯಾಕೇಜ್ 55 ಲಕ್ಷವನ್ನು ಪಡೆದುಕೊಂಡಿರುವ ಬಗ್ಗೆ ಉಲ್ಲೇಖವಿದೆ. ಆದರೆ ಈಗ ಕಾಲೇಜು ವಿದ್ಯಾರ್ಥಿ ಪಡೆದಿರುವ ಪ್ಯಾಕೇಜ್ ಕಳೆದ ವರ್ಷದ ಅತ್ಯಧಿಕ ಅಂದರೆ 45 ಲಕ್ಷಕ್ಕಿಂತ ಹೆಚ್ಚು ಪ್ಯಾಕೇಜ್ ಎಂಬುದು ಗಮನಾರ್ಹ ಸಂಗತಿಯಾಗಿದೆ. ಇನ್ನು ಈ ಕ್ಯಾಂಪಸ್ ಡ್ರೈವ್ ನಲ್ಲಿ ಕನಿಷ್ಠ ಪ್ಯಾಕೇಜ್ ಪಡೆದಿರುವುದೆಂದರೆ 5 ಲಕ್ಷ. ಕಳೆದ ವರ್ಷದ ಬ್ಯಾಚ್‌ನ ವಿದ್ಯಾರ್ಥಿಗಳು ಕನಿಷ್ಠ 3.7 ಲಕ್ಷ ಪಡೆದುಕೊಂಡಿದ್ದರು. ಈ ವರ್ಷ 55 ಲಕ್ಷ ಗರಿಷ್ಠ ಪ್ಯಾಕೇಜ್‌ನಲ್ಲಿ ಹಲವು ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಶೇ.94ರಷ್ಟು ಬಿ.ಟೆಕ್. ವಿದ್ಯಾರ್ಥಿಗನ್ನು ಜೂ. 28ರಂದು ಹಲವು ಕಂಪೆನಿಗೆ ಆಯ್ಕೆಯಾಗಿದ್ದಾರೆ.

Samyuktha Karnataka,
Date:04/07/2023, p.no- 03